Regd. No. M 1299 SATYAVADI Founded 1917

ಸತ್ಯವಾದಿ

(ಆರಮನೆ ಸಿರಸ್ತೇದಾರ್ ಎಂ. ವಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 30 ಸಂಚಿಕೆ 83] ಸೋಮವಾರ 25—11—46 [ಬಿಡಿ ಪ್ರತಿ 6 ಪೈ

ಈ ವಾರದ ಭವಿಷ್ಯ

(ಓಂ ಜೋತಿಷ್ಯರಿಂದ)

ಮೇಷ — ಆರೋಗ್ಯ ಸ್ವಲ್ಪ ಕೆಡುವಂತಿದೆ. ಜಾಗರಣೆ ಸಂಭವನಿದೆ. ಆರ್ಥಿಕ ಮುಗ್ಗಟ್ಟೂ ಕಾಣಬರುತ್ತದೆ. ಮನಸ್ಸಿನಲ್ಲಿ ಕಳವಳ ವ್ಯವಹಾರದಲ್ಲಿ ದುಃಖ.

ವೃಷಭ— ಆರೋಗ್ಯ, ಮನಸ್ಸಿಗೆ ಸಂತೋಷ, ಧನಲಾಭ ಚೆನ್ನಾಗಿದೆ. ವ್ಯವಹಾರದಲ್ಲಿ ಏಳಿಗೆ.

ಮಿಥುನ— ಶಾರೀರಕ ಆರ್ಥಿಕ ಸ್ಥಿತಿಗಳು ಉತ್ತಮವಿದ್ದು ವ್ಯವಹಾರದಲ್ಲಿ ಗೌರವ ಲಭಿಸುತ್ತದೆ.

ಕರ್ಕಾಟಕ— ಮನೋಶಾಂತಿ ಇರುವುದಿಲ್ಲ, ಮನೆಯಲ್ಲಿ ಜಗಳವಾಗುವ ಸಂಭವವಿದೆ. ಆರ್ಥಿಕ ಮುಗ್ಗಟ್ಟು ಬೇರೆ.

ಸಿಂಹ— ಸಂತೋಷ ಪ್ರತಿಷ್ಟೆಗಳಿಗಿದ ಕೂಡಿದ ವಾರವಿದು. ಹರ್ಷಚಿತ್ತರಾಗಿರಿ.

ಕನ್ಯಾ— ಮಾನಸಿಕ ಸಾಂಪತ್ತಿಕ ವಿಷಯಗಳು ಸಾಮಾನ್ಯವಾಗಿರುತ್ತವೆ. ಆರೋಗ್ಯವು ಚೆನ್ನಾಗಿರದು. ವ್ಯವಹಾರವು ಸುಖಗನುವಾಗಿರುವುದಿಲ್ಲ.

ತುಲ— ಸಂತಾಪ ಕಷ್ಟ ದುಃಖಗಳೇ ಈ ವಾರ ನಿಮ್ಮನ್ನು ಕಾಡಿಸುತ್ತಿರುತ್ತವೆ.

ವೃಶ್ಚಿಕ— ಗ್ರಹಗಳು ಕ್ರೂರವಾಗಿವೆ. ಧ್ಯಾನ ಪರಾಯಣರಾಗಿರುವುದು ಉತ್ತಮ.

ಧನಸ್ಸು— ಎಲ್ಲಾ ಬಗೆಗಳಲ್ಲಿಯೂ ಉತ್ತಮವಾಗಿದೆ ಆನಂದದೊಡನೆ ನಲಿದಾಡಿ.

ಮಕರ— ಖರ್ಚು ಹೆಚ್ಚು, ಕಷ್ಟ ಹೆಚ್ಚು ಹೆಚ್ಚು. ಆದರೆ ಆರೋಗ್ಯ ಚೆನ್ನಾಗಿರುತ್ತದೆ.

ಕುಂಭ— ಶುಭಸಂಪದಗಳೊಂದಿಗೆ ಕೂಡಿದ ವಾರ. ಆನಂದ ಕಾಲ.

ಮೀನ— ಶಾರೀರಕ ಮಾನಸಿಕ ಆಸ್ವಸ್ಥೆಗಳಿರುತ್ತವೆ. ವ್ಯವಹಾರದಲ್ಲಿ ತೊಂದರೆಗಳೊದಗಬಹುದು. ಮನಸ್ಸನ್ನು ಶಾಂತಿಯಿಂದಿಟ್ಟುಕೊಂಡಿರಲು ಯತ್ನಿಸಿ.

ಕೈಲಾಸಂ ನಿಧನ

ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಶ್ರೀ ಟಿ. ಪಿ. ಕೈಲಾಸಂ ನಿನ್ನೆಯ ದಿವಸ ಬೆಳಿಗ್ಗೆ ಬೆಂಗಳೂರಿನ ತಮ್ಮ ಸ್ವಗೃಹದಲ್ಲಿ ಹೃದಯ ಸ್ತಂಭನದಿಂದ ನಿಧನರಾದರು.

ಪ್ರಸಿದ್ಧ ಕವಿಗಳಾಗಿದ್ದ ಇವರು ತಮ್ಮ ಇಂಗ್ಲೀಷ್ ನಾಟಕಗಳಾದ 'ಭರತ' ಮತ್ತು 'ಪರ್ಪಸ್' ಕೃತಿಯಿಂದ ಗ್ರೀಸಿನ ದುರಂತ ನಾಟಕ ಕರ್ತೃಗಳಾದ ಯೂರಿಪೀಡಿಸ್ ಮುಂತಾದವರ ಸಮಕಾಲಿನರೆಂದು ಹೇಳುವುದುಂಟು.

ಕೈಲಾಸಂ ಕಣ್ಮರೆಯಾದುವ ಕರ್ನಾಟಕಕ್ಕೇನು, ಇಡಿಭರತ ಖಂಡಕ್ಕೆ ನಷ್ಟವೆನ್ನಬಹುದು.

ಸಂತಾಪ ಸೂಚಕ ಸಭೆ

ಮೈಸೂರು ನ 25 — ಶ್ರೀ ಕೈಲಾಸಂರವರ ನಿಧನ ವಾರ್ತೆ ತಿಳಿದಕೂಡಲೇ ಕಲಾ ಕೂಟದ ಕಾರ್ಯಕಾರಿ ಸಮಿತಿ ಸಭೆ ಸೇರಿ ಸಂತಾಪ ಸೂಚಕ ನಿರ್ಣಯವನ್ನು ಮಾಡಿತು.

ಗೂರಲಿಗೆ ಸಿದ್ಧೌಷಧ

ಈ ದಾನುಹರಣ ಅಮೃತ ಬೂತಿಯು 150 ವರ್ಷಗಳಿಂದ ಸುಪ್ರಸಿದ್ಧವಾಗಿದೆ ತಾ|| 8-12-46 ಪೂರ್ಣಮಿ ದಿವಸ ಬೆಂದು ಹೊತ್ತು ಸೇವಿಸುವುದರಿಂದ ಗೂರಲುರೋಗವು ಸಂಪೂರ್ಣವಾಗಿ ವಾಸಿಯಾಗುವುದು. ಇಂಗ್ಲೀಷಿನಲ್ಲಿ ಬರೆಯಿರಿ

Manager, Sri Gita Karyalaya
P. O. Nagod (Jabbulpur)

ಹಡಗು ಮುಳುಗಿತು

ದೇವಿಸಾರಿ ಎಂಬ ನೌಕೆಯು ಕಲ್ಕತ್ತಾದಿಂದ ಬೊಂಬಾಯಿಗೆ ಒಡುತ್ತಿತ್ತು. ತೆಂಗಿನಕಾಯಿ ಮತ್ತು ತೊಲೆಗಳಿಂದ ಅದನ್ನು ತುಂಬಲಾಗಿತ್ತು. ಕೇಟಿ ಬಂದರಿನ ಬಳಿ ಪ್ರಚಂಡ ಬಿರುಗಾಳಿ ಎದ್ದು ಹಡಗು ಜಲಸಮಾಧಿಯಾಯಿತು. ರೂ. 1 ಲಕ್ಷ ನಷ್ಟವಾಗಿರುವುದು. 12 ಮಂದಿ ನಾವಿಕರು ಮಾತ್ರ ಈಜಿಕೊಂಡು ಬಂದರು.

ಲಂಚ !

ವಿಜಾಪುರದ ಸಿಂದಗಿ ಮತ್ತು ಇಡಿ ತಾಲ್ಲೂಕುಗಳ ಸೇಂದಿ ಇನ್ಸ್‌ಪೆಕ್ಟರಾದ ಶ್ರೀ ಎಸ್. ಎ. ದೇಹಲ್ಲಿಯವರು ಇಂಡಿ ಮಕ್ತೇದಾರನಿಂದ ರೂ. 100 ಲಂಚ ತೆಗೆದುಕೊಂಡರು. ಕೆಲವು ಕಾಂಗ್ರೆಸ್ ಕೆಲಸಗಾರರು ಮತ್ತು ಲಂಚ ನಿರ್ಮೂಲ ಶಾಖೆಯ ಸಬ್ ಇನ್ಸ್‌ಪೆಕ್ಟರ್ ಶ್ರೀ ಮಂಠರವರುಗಳು ಲಂಚಕೋರ ಇನ್ಸ್‌ಪೆಕ್ಟರ್ ಕಛೇರಿಗೆ ಮುತ್ತಿ ಬಹಳ ಉಪಾಯದಿಂದ ರೂ 100 ಲಂಚ ಕಾಣಿಕೆಯನ್ನು ವಶಪಡಿಸಿಕೊಂಡು ಮೊಕದ್ದಮೆ ಹೂಡಿರುವರು.

ಕಮ್ಯೂನಿಸ್ಟ್ ಪಕ್ಷದ ದಸ್ತಗಿರಿ

ರಾಜದ್ರೋಹದ ಆರೋಪಣೆಯ ಮೇರ್ಕ್ಯಾ ದಕ್ಷಿಣ ಆಫ್ರಿಕಾದ ಕೇಂದ್ರ ಶಾಸನ ಸಭೆಯ ಕಮ್ಯೂನಿಸ್ಟ್ ಪಕ್ಷದ ಸದಸ್ಯರೆಲ್ಲರನ್ನೂ ದಸ್ತಗಿರಿ ಮಾಡಿದರಂತೆ !

ಸೈಕಲ್ ಷಾಪ್ ಮುಷ್ಕರ

ಮೈಸೂರು ನ 25 — ಜಿಲ್ಲಾಧಿಕಾರಿಗಳ ಅಪ್ಪಣೆ ಚೀಟಿಯನ್ನು ಪಡೆದು ಸೈಕಲ್ ಸಾಮಾನುಗಳನ್ನು ಮಾರಬೇಕೆಂಬುದನ್ನು ಪ್ರತಿಭಟಿಸಿ ಅನೇಕ ಷಾಪುಗಳನ್ನು ಮುಚ್ಚಲಾಗಿದೆ. ಸಿವಿಲ್ ಸಪ್ಲೈ ಕಂಟ್ರೋಲರೊಡನೆ ಈ ವಿಷಯವಾಗಿ ಸೈಕಲ್ ಅಂಗಡಿ ಸಂಘದವರು ಭೇಟಿ ಮಾಡುವುದಾಗಿ ತಿಳಿಯಬಂದಿದೆ.

ಆರೋಗ್ಯ ಚಿತ್ರ ಪ್ರದರ್ಶನಗಳು

ಮೈಸೂರು ನ 22— ಮೈಸೂರು ಮುನಿಸಿಪಾಲಿಟಿಯ ಪ್ರಚಾರ ಉಪಸಮಿತಿಯವರು ಆರೋಗ್ಯ ಚಲನಚಿತ್ರಗಳನ್ನು ಈ ಕೆಳಗೆ ಕಂಡ ಸ್ಥಳಗಳಲ್ಲಿ ಪ್ರದರ್ಶಿಸಲಿದ್ದಾರೆಂದೂ, ಈ ಉಚಿತ ಸಿನಿಮಾ ಪ್ರದರ್ಶನಗಳನ್ನು ನೋಡಿ ಪ್ರಯೋಜನ ಪಡೆಯಲು ಜನರು ಹೆಚ್ಚಹೆಚ್ಚಾಗಿ ಬಂದು ನೋಡಬೇಕೆಂದೂ ಕೋರಿದ್ದಾರೆ.

ತಾ || 25	ಟೌನ್ ಹಾಲ್
ತಾ || 26	ಪಡುವಾರಹಳ್ಳಿ
ತಾ || 27	ಕನ್ನೇಗೌಡನಕೊಪ್ಪಲು
ತಾ || 28	ಆ ಕ. ಹಾಸ್ಪಲ್ ನಬರ್ಬಾದ

ಹೊಸಹೊಸ ಸುದ್ದಿ

ಶ್ರೀರಾಂಪುರ ನ 22 .... ಗಾಂಧೀಜಿಯವರು ತಮ್ಮ ಕ್ಯಾಂಪಿನಿಂದ ಅರ್ಧ ಮೈಲಿ ದೂರದಲ್ಲಿನ ಒಂದು ವಸ್ತಿಗೆ ಸಂಸಾರಕ್ಕೆ ಭೇಟಿ ಕೊಟ್ಟು ಮಾತುಕತೆ ನಡೆಸಿದರು.

ಮಿರತ್ ನ 23 — ಆತ್ಮ ಸಂರಕ್ಷಣೆಗಾಗಿ ಹಿಂಸಾಕಾರ್ಯವನ್ನು ಆಚರಿಸಬಹುದೆಂದು ಕಾಂಗ್ರೆಸ್‌ನಲ್ಲಿ ಸರದಾರ್ ಪಟೇಲರು ಮಾಡಿದ ಭಾಷಣದಲ್ಲಿ ತಿಳಿಸಿದರು.

ಟೋಕೀಯೊ ನ 21 — ಆಕ್ರಮಣ ಕಾಲಕ್ಕೆ ಮುಂಚೆ ಜಪಾನು ಸಶಸ್ತ್ರ ಸೈನಿಕರಿಂದ ಮುಚ್ಚಿಡಲ್ಪಟ್ಟಿದ್ದ 6250000 ಪೌಂಡು ಬೆಲೆಯ ವಜ್ರಗಳು ಪತ್ತೆ ಮಾಡಲಾಗಿವೆ

ಲಂಡನ್ ನ 23 — ಶನಿವಾರದ ಕೀಗು ಫುಟ್‌ಬಾಲ್ ಮ್ಯಾಚು ನೋಡಲು 8 ಲಕ್ಷ ಜನರು ಹಾಜರಿದ್ದರು.

ಸತ್ಯ ವಿಚಾರಗಳನ್ನೇ ಚಿಂತಿಸು : ನಿನ್ನ ವಿಚಾರಗಳು ಪ್ರಪಂಚದ ಕ್ಷೇಮಕ್ಕೆ ಆಹಾರವನ್ನೀಯುತ್ತವೆ. ಸತ್ಯವನ್ನೇ ನುಡಿ. ನಿನ್ನ ನುಡಿಯು ಪ್ರತಿಫಲವನ್ನೀಯುವ ಬೀಜವಾಗುವುದು. ಸತ್ಯವಾಗಿವಾಗಿ ಜೀವಿಸು. ನಿನ್ನ ಜೀವನವು ಒಂದು ಹಿರಿಯದಾದ ಘನತೆಯಿಂದ ಕೂಡಿದ ಮತವಾಗುತ್ತದೆ.

ಹದಗೆಡುತ್ತಿರುವ ಹವ್ಯಾಸ ! !

ಮೈಸೂರು ಪೌರಸಭೆಯು ಚುನಾಯಿತ ಸ್ಥಾನಗಳಿಗೆ ಪುರ ನಿವಾಸಿಗಳು ಆ ಸ್ಥಾನಾಪೇಕ್ಷಿಗಳಾಗಿ ನಿಂತಿದ್ದವರ ಪೈಕಿ ಕಾಂಗ್ರೆಸ್ ಸೋಲಿನ ಭಕ್ತಿ ಪ್ರಾಧಾನ್ಯ ದೃಷ್ಟಿಯಿಂದ ೫೩ ಕಾಂಗ್ರೆಸ್ಸಿಗರನ್ನು ಆರಿಸಿದ್ದೂ ಆಯಿತು. ಕಾಂಗ್ರೆಸ್ಸಿಗರು ತಮಗಿದ್ದ ಒಂದು ಸ್ಥಾನ ಕಳೆಚಿ ಬಿದ್ದರೂ ಸಂತೃಪ್ತಿ ಪಟ್ಟುಕೊಂಡದ್ದೂ ಇಯಿತು. ಸ್ವತಂತ್ರರೂ ತಮ್ಮ ಪೈಕಿ ಒಬ್ಬರಿಗಾದರೂ ಸ್ಥಾನ ಲಭ್ಯವಾಯಿತಲ್ಲಾ ಎಂದು ತಮ್ಮ ತಮ್ಮ ಸೋಲುಗಳಿಗಾಗಿ ಹೆಚ್ಚು ನೊಂದುಕೊಳ್ಳುವುದನ್ನು ನಿಲ್ಲಿಸಿಯೂ ಆಯಿತು. ಇಷ್ಟೆಲ್ಲಾ ಆಗಿಹೋಗಿದ್ದರೂ ಇನ್ನೂ ಒಂದೆರಡು ಪತ್ರಿಕೆಗಳ ಇಂಗಿ ಹೋದ ಆ ಚುನಾವಣಾ ಚುರುಕಿನಿಂದಲೇ ಚಡಬಡಿಸುತ್ತಿರುವುದು ಹಾಸ್ಯಾಸ್ಪದವಾಗಿದೆ.

ಈ ಹವ್ಯಾಸ ಇನ್ನಾದರೂ ನಿಲ್ಲಲಿ

ದೇಶಾಭಿಮಾನಿ

ಮೃತ್ಯುಂತ ಸಂಗ್ರಹ

ನವದೆಹಲಿ ನ 17 — ಬೀಹಾರ್ ಗಲಭೆಗಳಿಗೆ ಕಾಂಗ್ರೆಸ್ಸೇ ಹೊಣೆ, ಗವರ್ನರ್ ಕರ್ತವ್ಯ ಲೋಪ ಮಾಡಿದ್ದಾರೆ ತಪ್ಪಿತಸ್ಥರಿಗೆ ಶಿಕ್ಷೆ ಅತ್ಯಗತ್ಯ ಎಂದು ಅಖಿಲ ಭಾರತ ಮುಸ್ಲಿಂ ಲೀಗ್ ಚಳುವಳಿ ಸಮಿತಿ ನಿರ್ಣಯಿಸಿದೆ.

ನವದೆಹಲಿ ನ 18 — ಕೇಂದ್ರ ಸಭೆಯಲ್ಲಿ ಆವಿರೋಧವಾಗಿ ರಚನಾತ್ಮಕ ಸಭೆಯ ವೆಚ್ಚಕ್ಕಾಗಿ ರೂ. 1783000 ಮಂಜೂರಾಯಿತು.

ಬಿಹಾರ್ ಘಟನೆಗಳನ್ನು ಕುರಿತು ಪಂ|| ನೆಹರುರವರು ಗುಂಡು ಹಾರಿಸಲಾಗುತ್ತದೆ. ಅವಶ್ಯ ಬಿದ್ದರೆ ಬಾಂಬು ಪ್ರಯೋಗಿಸಲಾಗುತ್ತದೆ. ಎಂದು ಎಚ್ಚರಿಕೆಯಿತ್ತರಷ್ಟೆ ! ಪಂ|| ನೆಹರು ಈ ಕಾರ್ಯಗಳಿಗೆ ಬ್ರಿಟಿಷ್ ಪಡೆಗಳನ್ನು ಉಪಯೋಗಿಸ ಬಾರದೆಂದೂ ಬ್ರಿಟೀಷರು ಭಾರತ ಬಿಟ್ಟ ತೊಲುಗುವಾಗ ಜಾರತೀಯರು ನಿರ್ವಹಿಸಬೇಕಾದ ಕಾರ್ಯಕ್ಕೆ ಬ್ರಿಟೀಷ್ ಸೇನೆ ಸಹಾಯ ಏಕೆ ? ಎಂಬುದಾಗಿ ಲಾರ್ಡ್ ಜೀವರ್ ಬ್ರೂಕ್ ಪ್ರಶ್ನಿಸಿರುವುದಾಗಿ ಗೊತ್ತಾಗಿದೆ.

ಈಚೆಗೆ ನಡೆದ ಬ್ರಿಟನ್ನಿನ ಪೌರ ಜುನಾನಣೆಯೊಂದರಲ್ಲಿ ಭಾರತೀಯನಾದ (ಡಾಕ್ಟರ್) ಸ್ಕೀಮ್ ಎಂಬಾತ ತನ್ನ ಕನ್ಸರ್‌ವೇಟೀವ್ ಪಕ್ಷದ ಎದುರಾಳಿಯನ್ನು ಸೋಲಿಸಿ, ವಿಜಯಿಯಾದನೆಂದು ತಿಳಿಯಬಂದಿದೆ.

ವಿಾರತ್‌ನಲ್ಲಿ ನಡೆಯುವ ಕಾಂಗ್ರೆಸ್ ಮಹಾಧಿವೇಶನಕ್ಕೆ ಗಾಂಧೀಜೀ ಆಗಮಿಸುವುದಿಲ್ಲವೆಂದು ಆಚಾರ್ಯ ಕೃಪಲಾನಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು.

ಲಂಡನ್ ನ 18 — ಜರ್ಮನಿಯು ಬ್ರಿಟಿಷ್ ಭಾಗಕ್ಕೆ ರಷ್ಯನರು ಆಹಾರವನ್ನು ರವಾನಿಸಿರುವರು.

ವಾಷಿಂಗ್ಟನ್ ನ 17— ಕಲ್ಲಿಜ್ಹಲು ಗಣಿ ಕೆಲಸಗಾರರ ಮುಷ್ಕರದ ಬೆದರಿಕೆಗಾಗಿ ಅಮೇರಿಕಾ ಸರಕಾರವು ತಮ್ಮ ಅಧೀನದಲ್ಲಿರುವ 3300 ಗಣಿಗಳನ್ನು ಸದಾ ತೆಗೆದಿರುವಂತೆ ಆಜ್ಞೆ ಮಾಡಿದೆ.

ನವದೆಹಲಿ ನ 18 — ಕೇಂದ್ರ ಸಭೆಯಲ್ಲಿ ಗೃಹ ಮಂತ್ರಿ ಸರದಾರ್ ಪಟೇಲರು ಲಂಚ ಗೊಳಿತನ ನಿರ್ಮೂಲಕ್ಕೆ ಹೊಸದೊಂದು ಮಸೂದೆಯನ್ನು ಮಂಡಿಸಿರುವರು

ಸುದ್ದಿಗಾರರ ದೌಡು

ಈಗಾಗಲೇ ಮಿರತದಲ್ಲಿ ಕೂಡಲಿರುವ ಕಾಂಗ್ರೆಸ್ ಅಧಿವೇಶನಕ್ಕೆ ಹಾಜರಾಗುವ ಕುರಿತು ಸುಮಾರು ೧೦೦೦ ಸುದ್ದಿಗಾರರು ಹಾಗು ಪತ್ರ ಪ್ರತಿನಿಧಿಗಳು ಒರೆದುಕೊಂಡಿದ್ದರು, ಆದರೆ ಸ್ಥಳದ ಅನಾನುಕೂಲತೆಯ ಬಗ್ಗೆ ಕೇವಲ ೩೦೦ ಜನರಿಗೆ ಪರವಾನಗಿ ಕೊಡಲಾಗಿರುವದೆಂದು ರಿಸೆಪ್ಷನ್ ಕಮಿಟಿಯವರು ಜಾಹೀರ ಪಡಿಸಿದ್ದಾರೆ.

ಗಲಭೆಯಲ್ಲಿ ಸಾವು ನೋವು

ಲಂಡನ್ ನ 18 — ಕಾಮನ್ಸ್‌ನಲ್ಲಿ ಎಸ್|| ಆಟ್ಲಿಯವರು ಬ್ರಿಟಿಷ್ ಇಂಡಿಯಾದಲ್ಲಿ ಜೂನ್ 29 ರಿಂದ 5946 ಮಂದಿ ಕೊಲ್ಲಲ್ಪಟ್ಟಿರುವರೆಂದೂ 14550 ಮಂದಿ ಗಾಯಗೊಂಡಿರುವರೆಂದೂ ಇದಲ್ಲಾ ಹೆಚ್ಚು ಕಡಿಮೆ ಕೋಮುವಾರು ಗಲಭೆಗಳವೆಂದೂ ಹೇಳಿದರು.

ನೇತಾಜಿ

ತ್ರಿಚೂರು ನ 18 — ಮಲೆಯಾದ ಭಾರತ ಪರಿಹಾರ ಸಮಿತಿಯು ವೈಸ್ ಚೇರ್ಮನ್ನರಾದ ಶ್ರೀ ರಾಘವನ್ನರು ನೇತಾಜಿ ಸತ್ತಿರುವುದೇ ಪ್ರಾಯಶಕ್ತಿವೆಂದೂ ಆದರೆ ಬದುಕಿದ್ದರೂ ಬದುಕಿರಬಹುದೆಂದೂ ಹೇಳಿರುವರು.

ಗಂಡನನ್ನು ಕೊಂದ ಹೆಂಡತಿ

ಪ್ಯಾರಿಸ್ ನ 17 — ಕಣಿ ಹೇಳುವವರು ಹೇಳಿದ ಭವಿಷ್ಯದಂತೆ ಗೊಬ್ರೀಲ್ ರೂಸೊ ಎಂಬುವ ಫ್ರೆಂಚ್ ಒಕ್ಕಲಿಗನನ್ನು ತಾನೂ ಕೊಂದಿರುವುದಾಗಿ ಆತನ ಹೆಂಡತಿ ಹೇಳಿರುವಳು.

ಬಟಾವಿಯಾ ನ 18 — ಕಳೆದ ಶುಕ್ರವಾರ ಡಚ್ ಮತ್ತು ಇಂಡೋನೇಷಿಯಾ ಪ್ರತಿನಿಧಿಗಳ ಸಮಿತಿಯಲ್ಲಾದ ಒಪ್ಪಂದದಂತೆ ಜಾವಾ ಮುದರಾ ಸುಮಾತ್ರಗಳಲ್ಲಿ ಇಂಡೋನೇಷಿಯಾ ಪ್ರಜಾ ಪ್ರಭುತ್ವದ ಅಧಿಕಾರವನ್ನು ಡಚ್ ಸರಕಾರವು ಅಂಗೀಕರಿಸಿದೆ.

ದಕ್ಷಿಣ ಆಫ್ರಿಕಾದ ಕೇಪು ಟೌನು ಯೂನಿವರ್ಸಿಟಿಯಲ್ಲಿಯ ಹಿಂದೀ ಕಾಯದೆ ವಿದ್ಯಾರ್ಥಿಯಾದ ಮಿ ಕಾಸೀಮ ಅಪುರಾ ಇವರು ಇದೇ ತಾ|| ೨೨ ರೊಳಗಾಗಿ ಕೇಪ ಪ್ರಾಂತ ಬಿಟ್ಟು ಹೊರಗೆ ಹೋಗದಿದ್ದರೆ ಅವರನ್ನು ಬಂಧಿಸಲಾಗುವದೆಂದು ಹೇಳಲಾಗಿದೆ ಮಿ|| ಅಮರಾರವರು ಕೇಪ ಟಾವ್ನ್ ಸತ್ಯಾಗ್ರಹ ಕಾನ್ಸಿಲಿನ ಸೆಕ್ರೆಟರಿಗಳಲ್ಲಿ ಒರ್ವರಂತೆ,

ವಿವಾಹ ವಿಚ್ಛೇದನ

ಅಮೇರಿಕದ ಪ್ರಸಿದ್ಧ ಹಾಸ್ಯ ನಟ ಸಿನೆಮಾ ತಾರೆಯಾಗಿರುವ ಚಾರ್ಲಿಚಿಪ್ಲಿನನು ಮಾಡಿಕೊಂಡ ವಿವಾಹ ವಿಚ್ಛೇದಗಳಿಗಾಗಿ ೩೩ ಲಕ್ಷ ರೂಪಾಯಿ ಖರ್ಚಿಸಬೇಕಾಗಿಯಿತು. ಇನ್ನೊಬ್ಬ ಸಿನೆಮಾ ತಾರೆ ಜೋನ್ ಗಿಲ್ಬರ್ಟನು ವಿವಾಹ ವಿಚ್ಛೇದದಲ್ಲಿ ಹೆಂಡತಿಗೆ ನಾಲ್ಕು ಲಕ್ಷವನ್ನು ಕೊಡಬೇಕಾಯಿತಲ್ಲದೆ ಅವಳಲ್ಲಿ ಅವನಿಗಾದ ಮಗುವಿಗೆ ವರ್ಷಕ್ಕೆ ರೂಪ್ಯಾ 7 ಸಾವಿರದಂತೆ ತೆರಬೇಕಾಯಿತು. ವಿಲಿಯಮ್ ಹಾರ್ಟ್ ಎಂಬಾತನು ತನ್ನ ಹಳೆ ಹೆಂಡತಿಗೆ ವಿಳು ಲಕ್ಷ ರೂಪ್ಯಾ ಕೊಡಬೇಕಾಯಿತು. ಮಂಜು ಎಂಬಾತನು ತನ್ನ ಹಿಂದಿನ ಹೆಂಡತಿಗೆ ರೂಪ್ಯಾ 70000 ನಗದಿಯಲ್ಲಿಯೂ ರೂಪ್ಯಾ ೨ ಲಕ್ಷ ಬೆಲೆಯ ಒಂದು ಮನೆಯನ್ನೂ, ವಾರಕ್ಕೆ ರೂ. 1750 ನ್ನೂ ಕೊಡಬೇಕಾಯಿತು. ಜೋನ್ ಹಾರ್ಲೋ ಎಂಬ ನಟಿಗೆ ತನ್ನ ಹಳೆ ಗಂಡನಿಂದ ೫| ಲಕ್ಷ ರೂಪಾಯಿ ದೊರಕಿತು

ಅಮೇರಿಕದ ಸಿನೆಮಾ ನಟಿಗಳ ನೆಲೆಯಾಗಿರುವ ಹೊಲ್ಲಿವುಡ್‌ನಲ್ಲಿ ನಡೆಯುವ ಪ್ರಸಿದ್ಧ ವಿವಾಹ ವಿಚ್ಛೇದಗಳಲ್ಲಿ ಹೆಂಡತಿಗೆ ವರ್ಷಕ್ಕೆ ಕನಿಷ್ಟ ಪಕ್ಷ ೭೦೦೦ ರೂಪಾಯಿ ಕೊಡಬೇಕಾಗುತ್ತದೆ. ವಿಚ್ಛೇದ ಗೊಂಡ ಹೆಂಡತಿಯ ತಿಂಗಳ ಖರ್ಚು ಈ ಕೆಳಗಿನಂತೆ ಇದೆ.

ಬಾಡಿಗೆ ರೂ ೭೦೦ ಹಸೂರಿ ರೂ. ೧೫೦ ಆಡಿಗೆ ಮತ್ತು ಕೆಲಸದವಳಿಗೆ ರೂ. ೪೫೦ ಆಹಾರಕ್ಕೆ ರೂ ೧೦೦ ವಸ್ತ್ರಕ್ಕೆ ರೂ. ೨೧೦೦ ಆತಿಥ್ಯಕ್ಕೆ ರೂ. ೪೦೦ ಕಾರಿನ ಡ್ರೈವರ ರೂ ೬೦೦ ಔಷಧಕ್ಕೆ ರೂ ೪೦೦ ತಂಕಿ ಟಪ್ಪಾಲು ರೂ ೧೫೦ ಸೌಂದರ್ಯಕ್ಕೆ ರೂ ೭೫ ವಸ್ತ್ರ ಮಡಿಗೆ ಕೂಡಲಿಕ್ಕೆ ರೂ. ೭೫ ಜುಮ್ಲಾ ರೂ ೫೬೦೦ ಹೀಗೆ ವರ್ಷಕ್ಕೆ ರೂ ೭೦೦೦೦ ಕೊಟ್ಟಲ್ಲಿಗಂಡ ಕಳೆದು ಕೊಂಡ ಬಡ ಹುಡುಗಿಗೆ ಕೈಯಲ್ಲಿ ಕಾಸು ಉಳಿಯುವುದು ಕಷ್ಟ.

ಹೊಸ ವಿಮಾನ

36 ಟನ್ನುಗಳ ಭಾರವನ್ನು ಹೊರಲ್ಲಿ 10 ಸಾವಿರ ಮೈಲು ದೂರ ಹೋಗಬಲ್ಲ ಶಕ್ತಿಯುಳ್ಳ ಹೊಸ ವಿಮಾನವು ಕಂಡು ಹಿಡಿಯಲ್ಪಟ್ಟಿದೆ. ಪೆಟ್ರೋಲು ತೆಗೆದು ಕೊಳ್ಳಲು ದಾರಿಯಲ್ಲಿ ಎಲ್ಲಿಯೂ ನಿಲ್ಲಬೇಕಾಗಿರುವುದಿಲ್ಲ. ಪುನಃ ಯುದ್ಧವಾದಲ್ಲಿ ಅಟಂ ಬಾಂಬುಗಳನ್ನು ಎಷ್ಟು ದೂರಕ್ಕಾದರೂ ಹೋಗಿ ಎಸೆದು ಬರಬಲ್ಲದೆಂದು ಹೇಳಲಾಗಿದೆ.

ಗಾಂಧೀಜಿ

ಖಜಿರ್ ಕಹಿತ್ ನ 20 — ಅಹಿಂಸೆಯ ಸಾರಭಾವಿಕವನ್ನು ಪರೀಕ್ಷಿಸುವ ಯೋಜನೆಗಾಗಿ ಗಾಂಧೀಜಿ ಖಜಿರಕಿಲ್ ಕ್ಯಾಂಪಿನಿಂದ ಶ್ರೀರಾಂಪುರಕ್ಕೆ ದೋಣಿಯಲ್ಲಿ ಪ್ರಯಾಣ ಮಾಡಿದರು ಗಾಂಧೀಜಿ ಹೊರಟಾಗ ಎಲ್ಲರ ಕಣ್ಣಿಂದಲೂ ನೀರು ಬಂದಿತು, ಡಾ|| ಸುಶೀಲನಾಯರ್ ಮತ್ತು ಶ್ರೀಮತಿ ಅಮಗಾಂಧಿ ಅತ್ತರು, ಗಾಂಧೀಜೀ ಜೊತೆ ಪ್ರೊ|| ಬೋಸ್ ಮತ್ತು ಅವರ ಶೀಘ್ರಲಿಪಿ ಬರಹಗಾರರು ಮಾತ್ರವಿದ್ದರು.

ಅವರ ಯೋಜನೆ ಏನೆಂದರೆ ಗಲಭೆ ಸ್ಥಳಗಳಿಗೆ ಒಬ್ಬಬ್ಬರನ್ನು ಮಾತ್ರ ಜೊತೆಯಲ್ಲಿ ಕರೆದುಕೊಂಡು ಹೋಗುತ್ತಾ ಹಿಂದೂ ಪ್ರಸನ್ನರಿಗೆ ಇನ್ನೇನು ಅಪಾಯಕ್ಕೆ ಹೆದರಬೇಕಾಗಿಲ್ಲವೆಂದು ತೋರಿಸುವುದೇ ಆಗಿದೆ.

ಕಳ್ಳತದಿಂದ ಭಂಗಾರ ಸಾಗಿಸುವ ಪ್ರಯತ್ನ

ನಾಗಪಟ್ಟಣ ನ 20 — ಕಳೆದ ಮಂಗಳವಾರ ಇಲ್ಲಿಂದ ಸಿಲೋನಿಗೆ ಹೋಗಬೇಕೆಂದಿದ್ದ ದೋಣಿಯನ್ನು ಪರಿಕ್ಷಿಸಲಾಗಿ ಅದರಲ್ಲಿಯ ಒಂದು ಟೊಳ್ಳು ಮರದ ತುಂಡಿನಲ್ಲಿ 200 ತೋಲಾ ಗಟ್ಟಿ ಭಂಗಾರ 80 ತೋಲಾ ಭಂಗಾರದ ಉಂಗುರ ಸರಪಣಿಗಳೂ ರೂ 35000 ಬೆಲೆಯ 92 ಕೈ ಗಡಿಯಾರಗಳೂ ಇದ್ದರು ಪತ್ತೆಯಾಗಿದೆ. ಈ ಪದಾರ್ಥಗಳನ್ನು ವಶಪಡಿಸಿಕೊಂಡು ಈ ಸಂಬಂಧದಲ್ಲಿ ಒಬ್ಬನನ್ನು ದಸ್ತಗಿರಿ ಮಾಡಲಾಗಿದೆ

ಮುರಿಲ್ ಲಿಸ್ಟರ್ ಕನ್ಯೆ

ಈಕೆಯು ಗಾಂಧಿಯವರ ಶಿಷ್ಯಳು. ಪೂರ್ವಬಂಗಾಳದಲ್ಲಿ ಸುತ್ತಾಡಿ ಈಕೆಯು ಹೀಗೆ ತಿಳಿಸಿದ್ದಾಳೆ — ಈಗ ಲಾಟಿಗಳಿಗೆ ಕಾರಣಗಳು ಸ್ಥಾನಿಕವಾಗಿ ಹಲವು ಬಗೆಗಳಲ್ಲಿ ಹೇಳಿಕೊಳ್ಳಲ್ಪಡುತ್ತಲಿವೆ. ಈ ಪರಶುರಾಮ ಪ್ರೀತಿಗೂ ಈ ದೌರ್ಜನ್ಯಕ್ಕೂ ಮೂಲವನ್ನು ಕುರಿತು ಒಂದು ಮಾತ್ರ ಸ್ಪಷ್ಟವಾಗಿ ಹೇಳಬಹುದು. ಇನ್ನು ಗ್ರಾಮಸ್ಥರು ಅಕಸ್ಮಾತ್ತಾಗಿ ಅಗ್ರಹಗೊಂಡು ಎದುರು ಬೀಳುವದಲ್ಲ. ಬಂಗಾಳದಲ್ಲಿ ಎಷ್ಟು ಮಂದಿ ತಾಡೀಗಳಾದರೂ ಪಾಸ ಮಾಡಿಕೊಂಡಿರಬಹುದು, ಅವರೇ ತಮಗೆ ತಾವೇ ಇಷ್ಟು ವ್ಯವಹಾರಕ್ಕೆ ಏರ್ಪಾಡು ಮಾಡಲಾಗದು. ಮನೆಗಳ ಮೇಲೆ ಪಿಡಕಾರಿಗಳಿಂದ ಪೆಟ್ರೋಲು ಸುರಿದು ಸುಟ್ಟರಲ್ಲಾ ! ರೀತಿಯ ಪ್ರಕಾರವಾರುವ ಈ ಎಣ್ಣೆಯನ್ನು ಯಾರೂ ಇವರಿಗೆ ಒದಗಿಸಿಕೊಟ್ಟರು ? ಈ ಹಳ್ಳೀ ಸ್ಥಳಗಳಿಗೆ ' ಸ್ಟರ್ ಅವ್ ' ಪಂಪು ' ಗಳನ್ನೂ ಯಾರು ತಂದು ಕೊಟ್ಟರು ? ಇವರಿಗೆ ಆಯುಧಗಳನ್ನು ಜಾಣಿ ಒದಗಿಸಿಕೊಟ್ಟರು. ——

ತಾ॥ 25-11-46 ॥ಶ್ರೀ॥ ಸಂ. 11

"ಪ್ರಬೋಧ"

ಮೈಸೂರು ದೇಶೀಯ ವರ್ಣಾಶ್ರಮ ಸ್ವರಾಜ್ಯ ಸಂಘದ
ಬೋಧಪ್ರದ ಸಪ್ತಾಹಿಕ ಪ್ರಕಟನಮಾಲೆ

ಸಂಪಾದಕ– ಗುಂಡ್ಮಿ ಮಹಾಬಲಭಟ್ಟ, ವೇದಾಂತಶಿರೋಮಣಿ ವೇಗಾಗಾರತವಿಶಾರದ
ಸಂಘದ ಕಾರ್ಯದರ್ಶಿ, ದೂವರ್ಸಪುರಂ, ಶಿವಮೊಗ್ಗಾ ಜಿಲ್ಲಾ

ನಾಮಸ್ಮರಣೆಯ ಮೇಲೆ ಪ್ರತಿಬಂಧ

ಅಲಹಾಬಾದಿನಲ್ಲಿ ನಡೆಯುತ್ತಿದ್ದ ಸಂಕೀರ್ತನ ಸಮ್ಮೇಳನವನ್ನು ಸರಕಾರವು ಪ್ರತಿಬಂಧಿಸಿದ್ದನ್ನೂ, ಸಮ್ಮೇಳನದ ಕಾರ್ಯಕರ್ತರಾದ ಪ್ರಭುದತ್ತ ಬ್ರಹ್ಮಚಾರಿ ಮುಂತಾದವರನ್ನು ದಸ್ತಗಿರಿ ಮಾಡಿದ್ದನ್ನೂ ತೀವ್ರವಾಗಿ ಖಂಡಿಸುತ್ತೇವೆ. ಮತ್ತು ಸಮ್ಮೇಳನದ ಮೇಲಿನ ಪ್ರತಿಬಂಧಕವನ್ನು ಕೂಡ್ಲೆ ಹಿಂತೆಗೆದು ಕೊಳ್ಳಬೇಕಾಗಿಯೂ ದಸ್ತಗಿಯಾದ ಸಾಧು ಜನರನ್ನು ತಕ್ಷಣ ಬಿಡುಗಡೆ ಮಾಡಬೇಕಾಗಿಯೂ ಇಚ್ಚಿಸುತ್ತೇವೆ' ಎಂಬ ತಂತಿಯನ್ನು ಆ ಭಾ. ಧರ್ಮ ಸಂಘಾಧ್ಯಕ್ಷರಾದ ಶ್ರೀ ಜಗದ್ಗುರುಗಳವರು ಸಂಯುಕ್ತ ಪ್ರಾಂತ್ಯದ ಗವರ್ನರಿಗೂ, ಮುಖ್ಯ ಮಂತ್ರಿ ಗೋವಿಂದವಲ್ಲಭ ಪಂತರಿಗೂ ಇತರ ಮಂತ್ರಿಗಳಿಗೂ ಕಳಿಸಿದ್ದಾರೆ.

ಈ ತಂತಿಯನ್ನು ಪ್ರಕಟನೆಗಾಗಿ ಹಿಂದುಸ್ಥಾನದ ಮುಖ್ಯಮುಖ್ಯ ಪತ್ರಿಕೆಗಳಿಗೂ, ವಾರ್ತಾ ಪ್ರಚಾರಕ ಸಂಸ್ಥೆಗಳಿಗೂ ಕಳಿಸಲಾಗಿದೆ.

ರಾಜಕರೇ! ಹಿಂದೂಗಳ ದುರವಸ್ಥೆಯನ್ನು ನೋಡಿರಿ. ಭಗವನ್ನಾಮ ಸಂಕೀರ್ತನೆಗೂ ಈಗಿನ ಸರಕಾರಗಳು ಅಡ್ಡಿ ಮಾಡುತ್ತಿವೆ. ಇತರ ಕೋಮಿನವರು ಭಯಂಕರ ದಂಗೆ ಅತ್ಯಾಚಾರಗಳನ್ನು ಮಾಡುತ್ತಿದ್ದರೂ ಅವರನ್ನು ಸರಿಯಾಗಿ ಶಿಕ್ಷಿಸದೆ, ಸುಮ್ಮನೆ ಸರಕಾರವು ನೋಡುತ್ತಿದೆ. ಇತ್ತ ನಾಮಸ್ಮರಣೆ ಮಾಡುವ ಸಾಧು ಸಂತರನ್ನೂ ಸಮ್ಮೇಳನವನ್ನೂ ಪ್ರತಿಬಂಧಿಸುತ್ತಿದೆ ಇದೆಂತಹ ಶೋಚನೀಯ ಸ್ಥಿತಿ ! ಸರಕಾರಗಳ ಇಂತಹ ಕಾರ್ಯವು ಸರ್ವಥಾ ಖಂಡನೀಯವಾಗಿದೆ.

ಹಿಂದೂಗಳೇ, ಇನ್ನಾದರೂ ಜಾಗ್ರತರಾಗಿರಿ. ಸುಸಂಘಟಿತರಾಗಿರಿ.

ಬಂಗಾಳಾ ಸಮಾಚಾರ

ಪೂರ್ವ ಬಂಗಾಳಾದ ದಂಗೆಯಲ್ಲಿ ಸಿಲುಕಿ, ಕಷ್ಟಪಡುತ್ತಿರುವ ಹಿಂದೂಗಳ ಸಹಾಯಕ್ಕಾಗಿ ಮತ್ತು ಧರ್ಮಾಂತರವಾದವರನ್ನು ಪುನಃ ಹಿಂದೂಧರ್ಮಕ್ಕೆ ಸ್ವೀಕರಿಸುವುದಕ್ಕಾಗಿ ಅ. ಭಾ- ವರ್ಣಾಶ್ರಮ ಸ್ವರಾಜ್ಯ ಸಂಘದ ಪರವಾಗಿ ಮುಂಬಯಿಯ ವಲ್ಲಭಾಚಾರ್ಯ ಪೀಠಾಧೀಶರಾದ ಶೀ ಕೃಷ್ಣಜೀವನಜೀಯವರೂ ಶ್ರೀ ದೇವನಾಯಕಾಚಾರ್ಯರೂ ಪರಿವಾರ ಸಮೇತವಾಗಿ ವಿಮಾನದಲ್ಲಿ ಕಲ್ಕತ್ತೆಗೆ ಹೋಗಿ, ಅಲ್ಲಿನ ಸ್ಥಿತಿಗತಿಗಳನ್ನು ಲೋಕಿಸಿದರು. ದೇವದಾಯಕಾಚಾರ್ಯರು ಧರ್ಮವೀರ ದಳದೊಂದಿಗೆ ದಂಗೆನಡೆದ ನೋಯಾಖಾಲೀಗೆ ಹೋಗಿದ್ದಾರೆ. ಅಲ್ಲವರು ಪೀಡಿತರಿಗೆ ಸಹಾಯವನ್ನೊದಗಿಸುವುದಲ್ಲದೆ ಶುದ್ಧೀ ಕಾರ್ಯವನ್ನೂ ನಡೆಸುವರು.

ಜಗದ್ಗುರುಗಳ ಪ್ರತಿಭಟನೆ

(ಸ್ವಂ.ಸು. ತಂತಿ)

ಸಿದ್ಧಪುರ ನ 21— ದ್ವಾರಕಾಪೀಠದ ಜಗದ್ಗುರು ಶ್ರೀ ಶಂಕರಾಚಾರ್ಯ ಸ್ವಾಮಿ ಶ್ರೀ ಅಭಿನವ ಸಚ್ಚಿದಾನಂದತೀರ್ಥ ಮಹಾರಾಜರವರು ಸರಕಾರಕ್ಕೂ ಮಂತ್ರಿಗಳಿಗೂ ಮತ್ತು ಅಸೆಂಬ್ಲಿ ಅಧ್ಯಕ್ಷರಿಗೂ ತಂತಿ ಕಳುಹಿಸಿ ಹಿಂದೂ ರಿಲೀಜಸ್ ಎಂಡೋಮೆಂಟು ಹಣವನ್ನು ಸಾರ್ವಜನಿಕರ ವಿದ್ಯಾಭ್ಯಾಸಕ್ಕೆ ಉಪಯೋಗಿಸುವ ಯೋಜನೆಯನ್ನು ಪ್ರತಿಭಟಿಸಿರುವರು ಮತ್ತು ಆ ಹಣವನ್ನು ಪುರಾತನ ಹಿಂದೂಮತೀಯ ವಿದ್ಯಾಭ್ಯಾಸ ಏಳಿಗೆಗೆ ಉಪಯೋಗಿಸಬೇಕೆಂದೂ ಸಾರ್ವಜನಿಕರು ಹಣವನ್ನು ಈ ಕಾರ್ಯಕ್ಕಾಗಿಯೇ ಕೊಟ್ಟಿರುವುದೆಂದೂ ತಿಳಿಸಿರುವರು.

ಮಾಧವನ ಮಾಧುರ್ಯ

[ಶ್ರೀಕರಪಾತ್ರೀಜೀ ಸ್ವಾಮಿಗಳು]

ಮುಂದುವರಿದುದು,

ತುಂಬಾ ಪ್ರಯತ್ನ ಮಾಡಿದರು. ಅದರೆ ಅದು ಕೈಗೆ ಸಿಗದಿದ್ದೊಡನೆ ಧಾತ್ರಿಯು ಮೊಗನೋಡಿ ಅಳಲಿಕ್ಕೆ ಹತ್ತಿದನು. ತನ್ನಾ ಪಡಿನೆಳಲನ್ನು ಹಿಡಿಯುವುದು ತನ್ನ ಸಾಮರ್ಥ್ಯಕ್ಕೆ ಮೀರಿದ ಕೆಲಸವೆಂದು ಬಗೆದು ಧಾತ್ರಿಯ ಕಯ್ಯಿಂದ ಅದನ್ನು ತೆಗೆದುಕೊಳ್ಳಲೆಳಿಸಿದನು. ಮರೆತುಬಿಟ್ಟನು ಬೆಣ್ಣೆ ಮೊಸರು ತಿನ್ನುವುದನ್ನು. ಆ ರೂಪದಲ್ಲಿ ಇಷ್ಟು ಮುಗ್ಧತೆಯುಂಟಾಯಿತು. ಇದೇ ಅಭಿಪ್ರಾಯದ ಒಂದು ಸೂಕ್ತಿಯಿದು.— 'ರತ್ನಸ್ಥಲೇ ಜಾನು-ಚರಃ ಕುಮಾರಃ ಸಂಗಾಜ್ರಮತ್ಮೀಯ ಮುಖಾರವಿನ್ದಮ್' ಆದಾತು ಕಾಮುಸ್ತದಲಾಭ ಖೇದಾನ್ನಿರೀಕ್ಷ್ಯ ಧಾತ್ರೀವದನಂರುರೋದುಯಾವಾಗ ಮಹಾ ನಟ ಶಿರೋಮಣಿಗೇ ಹೀಗೆ ಮೋಹವುಂಟಾದಾಗ ಅನ್ಯರ ಮಾತನ್ನು ಕೇಳುವುದೇನು ? ಇಷ್ಟು ಮಾತ್ರವಲ್ಲ ಶ್ರೀ ಶಾಮಸುಂದರನು ತನ್ನೀ ನಿಸ್ಕಾಮಕವಾದ ರೂಪ ರಾಶಿಯನ್ನು – ಅದ್ಭುತ ಸೌಂದರ್ಯವನ್ನು ಆಸ್ವಾದಿಸಲೋಸುಗ ಶ್ರೀ ರಾಧೆಯಾಗಲಿಚ್ಚಿಸುವನು ಆಗುವನು ಸಹ. ಏಕೆಂದರೆ ಉಪಭೋಗ್ಯವಾದ ವಸ್ತುವು ಉಪಭೋಕ್ತೃವಿನಿಗಿಂತ ಬೇರೆಯಾಗಿದ್ದಾಗಲೇ ಅದರ ಉಪಭೋಗವಾಗಬಹುದು. ಉಪಭೋಗ್ಯ ವಸ್ತುವು ಉಪಭೋಕ್ತೃವಿಗೆ ಅಭಿನ್ನವಾಗಿ - ಅವನ ಸ್ವರೂಪಭೂತವೇ ಆಗಿದ್ದರೆ ಅದರ ಉಪಭೋಗವು ತೀರ ದುರ್ಘಟವೇ ಸರಿ, ಇದರ ಮೇಲೊಂದು ಗಾದೆಯಿದೆ – ಧಹಿ ಸುನಿಪುಣೋಪಿ ನಟಬಟುಃ ಸ್ವಂಶ್ಯನ್ಧಮದಿರೊಂಥುಂ ಪಟುಃ – ಎಷ್ಟೇ ಜಾಣನಾದರೂ ತನ್ನ ಹೆಗಲನ್ನು ತಾನು ಏರಲಾಂನೆಂದು ಇದೇ ದೃಷ್ಟಿಯಿಂದ ವಿಸ್ಮಾಪನಂ ಸ್ವಸ್ಯಚ ಸೌಭಗರ್ದೇ ಎಂದು ಹೇಳಲಾಗಿದೆ.

ಮಠಾಧಿಪತಿಗಳ ಸಮ್ಮೇಳನ

ಇದೀಗ ಭರತಖಂಡದಲ್ಲಿ ರಾಜ್ಯಾಡಳಿತವು ಬದಲಾಯಿಸುವ ಕಾಲವೊದಗಿದೆ. ಹೊಸ ಆಡಳಿತದಲ್ಲಿ ಧರ್ಮವಿರುದ್ಧವಾವ ಹಲವು ಶಾಸನಗಳಾಗುವ ಸಂಭವವಿದೆ ಎಂಬುದು ಮಾತ್ರವಲ್ಲ ಆಗಿಯೇ ಆಗುವುವು. ಹೀಗಿರಲು ಧರ್ಮಾಚಾರ್ಯರು ಕರ್ತವ್ಯ ಕಾರ್ಯಗಳಲ್ಲಿ ಮುಖ್ಯವಾಗಿ ಧರ್ಮರಕ್ಷಣಾ ಕಾರ್ಯಕ್ಕೆ ಬರಬಹುದಾದ ತೊಂದರೆ ಕಷ್ಟಗಳನ್ನು ಪರಿಹರಿಸಿಕೊಳ್ಳುವುದು ಅತ್ಯಗತ್ಯ ಕಾರ್ಯವಾಗಿದೆ.

ಈ ಅಗತ್ಯ ಕಾರ್ಯವು ಹಿಂದೂಸ್ಥಾನದ ಎಲ್ಲಾ ಧರ್ಮಾಚಾರ್ಯರೂ ಒಂದುಗೂಡಿ ಆಗಬೇಕಾಗಿದೆ. ಹೀಗೆ ಈ ಧರ್ಮಾಚಾರ್ಯರ ಸ್ಥಾಯಿಯಾದ ಸಮಿತಿಯೊಂದು ನೇಮಕವಾಗಿ ಮುಂದಿನ ಆಗತ್ಯ ಕೆಲಸ ನಡೆಸಲು ವಿಚಾರ ನಡೆದು ಮಹಾಮಹೋಪಾಧ್ಯಾಯ ಶ್ರೀ ಅನಂತ ಕೃಷ್ಣಶಾಸ್ತ್ರಿಗಳು ಕಲ್ಕತ್ತಾದಿಂದ ಶ್ರೀ ಶ್ರೀ ದ್ವಾರಕಾ ಜಗದ್ಗುರುಗಳವರನ್ನು ಭೇಟ ಮಾಡಿ ಮುಂದಿನ ಮಾತುಕತೆಯಾಡಲು ಸಿದ್ಧಪುರಕ್ಕೆ ಬರುತ್ತಾರೆಂಬ ಬಳಿಕ ಇಲ್ಲಿ ವಿಚಾರ ವಿಮರ್ಷೆ ನಡೆದು ಮುಂದಿನ ಕಾರ್ಯಕ್ರಮವು ನಿಶ್ಚಿತವಾಗುವುದು.

ಸಾಧುಗಳ ಬಿಡುಗಡೆ

ಪ್ರಯಾಗದಲ್ಲಿ ಏರ್ಪಾಡಾಗಿದ್ದ ಸಂಕೀರ್ತನ ಸಮ್ಮೇಳನವನ್ನು ಅಲ್ಲಿಯ ಸರಕಾರವು ತಡೆದು ಅಲ್ಲಿಯ ಸಾಧುಗಳನ್ನು ಸೆರೆಯೆಲ್ಲಿಡಿಸಿದ್ದೂ, ಅದಕ್ಕೆ ದ್ವಾರಕಾ ಜಗದ್ಗುರುಗಳವರು ಸರಕಾರಕ್ಕೆ ಪ್ರತಿಭಟನೆ ತಂತಿಯನ್ನು ಕಳಿಸಿದ್ದೂ ಸರಿಯಷ್ಟೆ !

ಅದರಿಂದ ಅಲ್ಲೀಗ ಅಲ್ಲಿನ ಸರಕಾರವು ಆ ಸಾಧುಗಳನ್ನು ಬಿಟ್ಟಿದ್ದಲ್ಲದೆ ಅವರ ಮೇಲಿನ ಮೊಖದ್ದಮೆಯನ್ನು ಹಿಂದಕ್ಕೆ ತೆಗೆದುಕೊಂಡಿತೆಂಬ ಸುದ್ದಿಯನ್ನು ತಿಳಿಸಲು ಸಂತೋಷವಾಗುತ್ತದೆ. ಶ್ರೀ ಪ್ರಭುದತ್ತರಿಂದ ಇದಕ್ಕಾಗಿ ಶ್ರೀ ಜಗದ್ಗುರುಗಳಿಗೆ ತಂತಿಯೂ ಬಂದಿರುತ್ತದೆ.

ಬಂಗಾಳಾ ನಿಧಿ

ಶ್ರೀ ದ್ವಾರಕಪೀಠದ ಜಗದ್ಗುರುಗಳಿಂದ ರೂ. 1001

ಸಿದ್ಧಪುರದ ಮಹಾಜನಗಳಿಂದ 2500

ಹೀಗೆ ಇಷ್ಟರಲ್ಲಿ ಸಿದ್ಧಪುರದಲ್ಲಿ ವಸೂಲಾದ 3501 ರೂ. ಗಳನ್ನು ' ಸನ್ಮಾರ್ಗ ಕಾಶಿ, ಮುಖಾಂತರವಾಗಿ ಪೂರ್ವ ಬಂಗಾಳಾ ಪೀಡಿತರಿಗೆ ಕಳಿಸಲಾಯಿತು. ಇನ್ನೂ ಫಂಡು ಕೂಡಿಸುವ ಕಾರ್ಯವು ಬಿಡುಸಿನಿಂದ ನಡೆಯುತ್ತಿದೆ.

ಸಾದರ ಸ್ವೀಕಾರ

ಕೊಡಗಿನ ಭವಿಷ್ಯ - ಲೇಖಕರು - ಬಿ. ಡಿ. ಗಣಪತಿ ಮಡಕೇರಿ. ಬೆಲೆ ೧ ರೂ.

ಸುಮಾರು 160೧ ಚದರ ಮೈಲು ವಿಸ್ತೀರ್ಣವೂ 1½ ಲಕ್ಷ ಜನಸಂಖ್ಯೆಯೂ ಉಳ್ಳ ಪ್ರಕೃತಿ ಸೌಂದರ್ಯದ ಬೀಡೂ ಸಂಪತ್ತಿನ ಅವಿಶವೂ ಆದ ಕೊಡಗು ಕೊಡಗು ಪ್ರಾಂತ್ಯಕ್ಕೆ ' ಇಡೀ ಜಗತ್ತಿಗೆ ಮಾದರಿ ' ಎಂದು ಹೇಳಲ್ಪಟ್ಟರುವ ' ಭವಿಷ್ಯದ ತಿಕ್ಕಾಟಗಳು ' ಮಾಯುಪಾಗುವಂಥವುದೆಂದು ಭಾವಿಸಲ್ಪಟ್ಟಿರುವ ರಾಜ್ಯ ಯೋಜನೆಯೊಂದು ಈ ಗ್ರಂಥದಲ್ಲಿ ಬಹಳ ಸುಲಭ ಶೈಲಿಯಲ್ಲಿ ವಿರುದ್ಧ ಭಾವದವರು ತರುವ ಆಕ್ಷೇಪಣೆಗಳಿಗೆ ಸಮಂಜಸವಾದ ಸಮಾಧಾನಗಳೊಡನೆ ವಿವರಿಸಲ್ಪಟ್ಟಿದೆ. ಭಾಷಾ ಪ್ರಯುಕ್ತ ಪ್ರಾಂತ್ಯ ರಚನೆಯಲ್ಲಿ ಕುತೂಹಲವುಳ್ಳವರೆಲ್ಲರೂ ಈ ಪುಸ್ತಕವನ್ನು ಪಠಿಸುವದು ಅವಶ್ಯಕವೆಂದೂ ತೋರುತ್ತದೆ.

ನ್ಯೂಯಾರ್ಕ್ ನ 21 — ಭಾರತ ಮತ್ತು ದ. ಆಫ್ರಿಕಾದ ವ್ಯಾಜ್ಯವು ಪ್ರಪಂಚ ಸಮಸ್ಯೆಯೇ ಆಗಬಹುದೆಂದು ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಅಭಿಪ್ರಾಯ ಪಟ್ಟಿದ್ದಾರೆ.

ಕೈಲಾಸ ಬೆಟ್ಟದ ಮೂಲಿಕೆ
(ರಿಜಿಸ್ಟರ್ಡ್)

ಇದನ್ನು ತಾ|| 8-12-46 ನೇ ಪೂರ್ಣಿಮಿ ದಿವಸ ಒಂದು ಹೊತ್ತು ಸೇವಿಸುವುದರಿಂದ ಗೂರಲು ರೋಗವು ಸಂಪೂರ್ಣವಾಗಿ ಗುಣವಾಗುವುದು.

ಸೂಚನೆ — ಮುಕ್ಕೈ ಸಂಸ್ಥಾನದ ದಿವಾಣ ಮತ್ತು ಜಡ್ಜರಾದ ಶುಭದಯಾಳರು ' ಈ ಆಶ್ಚರ್ಯಕರವಾದ ಮೂಲಿಕೆಯಿಂದ 20 ರಲ್ಲಿ 18 ಮಂದಿಗೆ ಗುಣವಾಗಿದೆ ' ಎಂದು ತಿಳಿಸಿದ್ದಾರೆ. ಪತ್ರ ವ್ಯವಹಾರ ಇಂಗ್ಲೀಷ್-

Brahmachari G. Das
Sri Sidh Brahmacharya
Sewa Ashram, P. O. Chitrakot
Dt. Banda (U. P.)

Talk-a-Tone

Premier Film Mag. of S. India
Local Agent— D. Mahaadev
c/o Opera Talkies,,Myso

ಸತ್ಯವಾದಿ
ದಿನ ಪತ್ರಿಕೆ. ತಿಂಗಳಿಗೆ ಆರಾಣೆ
ಸೋಮವಾರದ ಸಂಚಿಕೆ
ವಾರ್ಷಿಕಚಂದಾ
ಪರಸ್ಥಳಕ್ಕೆ ಅಂಚೆವೆಚ್ಚ ಸೇರಿ 1--12--0

Edited, Printed and Published by M. S Krishna Rao at the Satyavadi Press Chamaraj Agra ahr Mysore.

At Opera ——
5th Glorious Week
Sri Murugan
ಶ್ರೀ ಮುರುಗನ್

ಹೊನ್ನಪ್ಪ ಭಾಗವತರ್, ಕಾಳಿ ಎಕ್ ರತ್ನ, ಮಾಲತಿ, ಜೀವರತ್ನ, ಯೋಗ ಮಂಗಳಂ ಮುಂತಾದವರು.

ಪಾತ್ರವಹಿಸಿರುವರು (ತಮಿಳು ಚಿತ್ರ)

At Ranjit—— 2nd Houseful Week

ಸೂರಿಯಾ - ಪಹರಿ ಸನ್ಯಾಲ್ - ಷಾ ನವಾಜ್

ಪಾತ್ರವಹಿಸಿರುವ

ಮೈಕ್ಯಾಕರೂಂ
Mai Kya Karam

ಪ್ರತಿ ದಿನ 3 ಆಟಗಳು .... ಅಮೋಘ ಹಿಂದಿ ಚಿ

ಸುಖ ಆರೋಗ ಆನಂದದಾಯಕ



ಜೀವಿತಕ್ಕೆ

ಸ್ವೀಮಡ್ ಮಾರ್ಕಿನ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ವುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ, ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ಶರೀರ ವ್ಯಾಧಿಗಳಿಗೂ ಒಂದು ಸಂಸಾರಿಕ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯುನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಸ್ಥಳಗಳ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪಲಂ ಪ್ಯಾಕೆಟ್ಟುಗಳಲ್ಲಿ ದೊರೆಯುತ್ತದೆ. ಬೆಲೆ ಒಂದು ಪೌಂಡಿಗೆ ರೂ. 3-8-0 ಮಾತ್ರ.

ನಮ್ಮ ಸುಘಂದ ಅಡಿಕೆಪುಡಿ ಒಂದು ವೈಶಿಷ್ಟ್ಯ.

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಖಾತರಿಯಾದುದು. ವಿವಂಗಳಿಗೆ ಮತ್ತು ಸ್ಯಾಂಪಲಿಗೆ ಬರೆಯಿರಿ —

ವಲ್ಲಭದಾಸ್ ತೇಜ್ ಪಾಲ್,
(ಹಿಂಗು, ಕೇಸರಿ ಮತ್ತು ಕಿರಾಣ ವ್ಯಾಪಾರಿಗಳು)
೧೪. ಗೋವಿಂದಪ್ಪ ನಾಯುಕ್ ರಸ್ತೆ, ಜಿ. ಟಿ. ಮದರಾಸು.

||ವಂದೇಮಾತರಂ||
ಶ್ರೇಷ್ಠವಾದ
ರಾಜಪುರಿ ಹೊಗೇಸೊಪ್ಪಿನಿಂದ
— ತಯಾರಿಸಲ್ಪಟ್ಟ —
ಕಾಂಗ್ರೆಸ್
(ರಿಜಿಸ್ಟರ್ಡ್)
ಮಂಗಳೂರು
ಬೀಡಿಗಳು
ಜೆ. ಎಸ್. ಟೊಬ್ಯಾಕೊ ವರ್ಕ್ಸ್
ಬಸ್ ಟರ್ಮಿನಸ್, ಮೈಸೂರು

ವೈಟೋಫೆರಿನ್

ಎ, ಬಿ, ಮತ್ತು ಡಿ ಎಂಬ ಶರೀರ ಪೋಷಕ ವೈಟಮಿನ್ಗಳಿಂದಲೂ, ಐರನ್ ಕ್ಯಾಲ್ಸಿಯಂ ಮತ್ತು ಫೋಟಾಸಿಯಂ ಎಂಬ ಲೋಹ ವಿಶೇಷಗಳಿಂದಲೂ ಕೂಡಿ, ಜೀನುತುಪ್ಪ ಮತ್ತು ಮಾಲ್ಟ್ ಸಾರಗಳಿಂದ ಬೆರೆತ ಉತ್ತಮ ವರ್ಗದ ಟಾನೀಕು.

ವೈಟಮಿನ್ನುಗಳ ಅಭಾವತೆಯಿಂದೊದಗುವ ಎಲ್ಲ ಅಸ್ವಸ್ಥತೆಗೂ, ರಕ್ತಹೀನತೆ ದೌರ್ಬಲ್ಯ ಮೊದಲಾದ ದೇಹಾಲಸ್ಯಕ್ಕೂ ಕೊಡಲು ಯೋಗ್ಯವಾದದ್ದು.

——0——

— ಮೈಸೂರಿನಲ್ಲಿ ತಯಾರಾದುದು —

—ಆ—

ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್ ಲ್ಯಾಬೋರೇಟರಿ ಲಿಮಿಟೆಡ್

ಮುಲ್ಲೇಶ್ವರಂ ಪೋಸ್ಟು .... ಬೆಂಗಳೂರು